ಗಣಿಗಾರಿಕೆ ನಿಷೇಧವಿದ್ದು, ಈ ಮರಳನ್ನು ತೆಗೆದು ಸಾರ್ವಜನಿಕರಿಗೆ ವಿತರಿಸಲು ಮರಳಿನ ಪ್ರಮಾಣವನ್ನು ಪರಿಶೀಲಿಸಿ ಸಾರ್ವಜನಿಕರಿಗೆ ವಿತರಿಸಲು ಸೂಕ್ತ ಆದೇಶ ಹೊರಡಿಸಲು ಪರಿಶೀಲಿಸಲಾಗುತ್ತಿದೆ.

ಭೂ–ಸ್ವಾಧೀನ ಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣ

1135 (841); ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹೆಚ್.ಡಿ. ಕೋಟೆ ಮತ್ತು ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿಗಳಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣವೆಷ್ಟು;

ಆ) ಈ ಭೂಮಿಯನ್ನು ಯಾವ ಉದ್ದೇಶಗಳಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ (ಸಮಗ್ರ ಮಾಹಿತಿ ನೀಡುವುದು);

ಇ) ಸರ್ಕಾರ ಪ್ರತಿ ಎಕರೆಗೆ ನಿಗಧಿಪಡಿಸಿರುವ ಮೊತ್ತವೆಷ್ಟು ಇದುವರೆವಿಗೂ ಬಿಡುಗಡೆ ಮಾಡಿರುವ ಮೊತ್ತವೆಷ್ಟು; ಬಿಡುಗಡೆ ಮಾಡಬೇಕಾಗಿರುವ ಬಾಕಿ ಮೊತ್ತವೆಷ್ಟು (ಸಂಪೂರ್ಣ ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಒಟ್ಟು 709–14 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಮತ್ತು ಹೆಚ್.ಡಿ.ಕೋಟೆ ತಾಲ್ಲೂಕು, ಹಳ್ಳದಮನುಗನಹಳ್ಳಿ ಗ್ರಾಮದಲ್ಲಿನ 990–08 ಎಕರೆ ಮತ್ತು ಹುಣಸೂರು ತಾಲ್ಲೂಕು, ಮನುಗನಹಳ್ಳಿ ಮತ್ತು ಇತರೆ ಗ್ರಾಮಗಳಲ್ಲಿನ ಒಟ್ಟು 3488–26 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.

ಆ) ಮೈಸೂರು ತಾಲ್ಲೂಕು, ಇಲವಾಲ ಹೋಬಳಿ ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಉದ್ದೇಶದ ವಿವರಗಳು:–

ಕ್ರ ಸಂ	ಯೋಜನೆಯ ಹೆಸರು	ಗ್ರಾಮ / ತಾಲ್ಲೂಕು	ಸ್ವಾಧೀನಪಡಿಸಿ ಕೊಂಡಿರುವ ಒಟ್ಟು ವಿಸ್ತೀರ್ಣ (ಎ–ಗು)
1.	ಕೈಗಾರಿಕಾ ಪ್ರದೇಶ	ಕೂರ್ಗಹಳ್ಳಿ, ಇಲವಾಲ ಹೋಬಳಿ, ಮೈಸೂರು ತಾ.	544–16
2.	ಮೆ: ಸ್ಕೈಟಾಪ್ ಬಿಲ್ಡರ್ಸ್ ಪ್ರೈ.ಲಿ.,	ಯಲಚಹಳ್ಳಿ, ಕರಕನಹಳ್ಳಿ ಇಲವಾಲ ಹೋಬಳಿ ಮೈಸೂರು ತಾ.	139–38
3.	ಮೆ: ರಾಮನ್ ಫೈಬರ್ ಸೈನ್ಸ್ ಪ್ರೈ.ಲಿ.,	ಚಾಮಹಳ್ಳಿ, ಹೆಚ್.ಡಿ.ಕೋಟೆ ತಾಲ್ಲೂಕು	25–00
		ಒಟ್ಟು	**709–14**

ಇ) ವಿವರಗಳು ಕೆಳಗಿನಂತಿವೆ:–

ಕ್ರ ಸಂ	ಯೋಜನೆಯ ಹೆಸರು	ಗ್ರಾಮ/ ತಾಲ್ಲೂಕು	ವಿಸ್ತೀರ್ಣ (ಎ–ಗು)	ಎಕರೆ ಒಂದಕ್ಕೆ ನಿಗದಿಪಡಿಸಿರುವ ಪರಿಹಾರ ದರ (₹ ಲಕ್ಷಗಳಲ್ಲಿ)	ಇದುವರೆಗೆ ಬಿಡುಗಡೆ ಮಾಡಿರುವ ಮೊತ್ತ		ಬಿಡುಗಡೆ ಮಾಡಬೇಕಾಗಿರುವ ಮೊತ್ತ		ಷರಾ
					ಮೊತ್ತ (₹ ಕೋಟಿಗಳಲ್ಲಿ)	ವಿಸ್ತೀರ್ಣ (ಎ–ಗು)	ಮೊತ್ತ (₹ ಕೋಟಿಗಳಲ್ಲಿ)	ವಿಸ್ತೀರ್ಣ (ಎ–ಗು)	
1	ಕೈಗಾರಿಕಾ ಪ್ರದೇಶ	ಕೂರ್ಗಹಳ್ಳಿ, ಮೈಸೂರು ತಾ	544–16	17 00 ಹಾಗೂ 17 50	44 23	267 12	48 27	277 04	ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ
2	ಮೆ ಸ್ಟೈಟಾಪ್ ಬಿಲ್ಡರ್ಸ್ ಪ್ರೈ ಲಿ.	ಯಲಚಹಳ್ಳಿ, ಕರಕನಹಳ್ಳಿ, ಇಲವಾಲ ಹೋಬಳಿ ಮೈಸೂರು ತಾ.	139–38	6 50	9 00	139–38	–	–	ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ
3	ಮೆ ರಾಮನ್ ಫೈಬರ್ ಸೈನ್ಸ್ ಪ್ರೈ ಲಿ.	ಜಾಮಹಳ್ಳಿ, ಹೆಚ್ ಡಿ ಕೋಟ ತಾಲ್ಲೂಕು	25–00	2 00	0 50	25–00	–	–	ಭೂಸ್ವಾಧೀನ ಪ್ರಕ್ರಿಯೆ ಮೂರ್ಣಗೊಂಡಿದೆ
4	ಕೈಗಾರಿಕಾ ಪ್ರದೇಶ	ಹಳ್ಳದಮನುಗನ ಹಳ್ಳಿ ಹೆಚ್ ಡಿ ಕೋಟೆ ತಾ	990–08	–	–	–	–	–	ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಭೂ ಪರಿಹಾರ ದರ ನಿಗದಿ ಪಡಿಸಲಾಗುವುದು
5	ಕೈಗಾರಿಕಾ ಪ್ರದೇಶ	ಮನುಗನಹಳ್ಳಿ ಮತ್ತು ಇತರೆ, ಹುಣಸೂರು ತಾ.	3488–26	–	–	–	–	–	